# ಶ್ರೀರಾಮಾನುಜರು – ಜೀವನ ಮತ್ತು ಸಾಧನೆ

◆ ಸ್ವಾಮಿ ತಪಸ್ಯಾನಂದ

[ಭಾರತದ ಆಧ್ಯಾತ್ಮಿಕ ಇತಿಹಾಸದಲ್ಲಿ ಶ್ರೀಶಂಕರಾಚಾರ್ಯರಂಥ ಜ್ಞಾನವರೇಣ್ಯರ ಬಳಿಕ ಆಚಾರ್ಯ ಪರಂಪರೆಯಲ್ಲಿ ಮೂಡಿದ ದಿವ್ಯಜ್ಯೋತಿಯೇ ಶ್ರೀರಾಮಾನುಜಾಚಾರ್ಯರು. ಶ್ರೀವೈಷ್ಣವ ಧರ್ಮದ ಸಾರಸರ್ವಸ್ವವನ್ನೂ ಕ್ರೋಡೀಕರಿಸಿ ಶ್ರೀವೈಷ್ಣವ ಧರ್ಮವನ್ನು ಸರ್ವಜನಪ್ರಿಯವನ್ನಾಗಿಸಿದ ಕೀರ್ತಿ ಇವರದು. ಮಧ್ಯಯುಗದ ಭಾರತ ಕಂಡ ಭಕ್ತಿಯ ಆಂದೋಲನದ ಪ್ರವರ್ತಕರಾಗಿದ್ದ ಇವರು ಅದ್ವಿತೀಯ ಹೃದಯವೈಶಾಲ್ಯತೆ ಉಳ್ಳವರಾಗಿದ್ದರು. ದಲಿತ ವರ್ಗದವರ ಸಾಮಾಜಿಕ ಮತ್ತು ಧಾರ್ಮಿಕ ಏಳ್ಗೆಯ ಬಗ್ಗೆ ತೀವ್ರ ತುಡಿತವಿದ್ದ ಶ್ರೀರಾಮಾನುಜರು ಶ್ರೀವೈಷ್ಣವ ಪ್ರಪಂಚದಲ್ಲಿ ಅವರಿಗಾಗಿ ಒಂದು ಯೋಗ್ಯ ಸ್ಥಾನವನ್ನು ಕಲ್ಪಿಸಿದರು.

ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ತಪಸ್ಯಾನಂದಜಿಯವರು ಇಂಗ್ಲಿಷಿನಲ್ಲಿ ಬರೆದ *Bhakti Schools of Vedanta* ಎಂಬ ಉದ್ಗ್ರಂಥದಲ್ಲಿ ಶ್ರೀ ರಾಮಾನುಜರೂ ಸೇರಿದಂತೆ ಐದು ಜನ ಭಕ್ತಿಪಂಥದ ಆಚಾರ್ಯರುಗಳ ಜೀವನ ಮತ್ತು ಸಿದ್ಧಾಂತಗಳ ವಿಶ್ಲೇಷಣೆಯನ್ನು ಮಾಡಿರುತ್ತಾರೆ. ಅದರಲ್ಲಿನ ಶ್ರೀರಾಮಾನುಜರ ಜೀವನವೃತ್ತಾಂತದ ಭಾಗದ ಅನುವಾದವನ್ನು ಇಲ್ಲಿ ಕೊಡಲಾಗಿದೆ. ಅನುವಾದಕರು : ಮೈಸೂರು ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಾಮಿ ವೀರೇಶಾನಂದರು.]

## ಜನನ ಮತ್ತು ದಿವ್ಯ ಐತಿಹ್ಯ

ಸಾಮಾನ್ಯವಾಗಿ ಅಂಗೀಕೃತವಾಗಿರುವ ಸಂಪ್ರದಾಯದ ಪ್ರಕಾರ, ಶ್ರೀರಾಮಾನುಜರು ಕ್ರಿ.ಶ. ೧೦೧೭ರಿಂದ ಕ್ರಿ.ಶ. ೧೧೩೭ರವರೆಗೆ ೧೨೦ವರ್ಷಗಳ ಸುದೀರ್ಘ ಜೀವನವನ್ನು ನಡೆಸಿದರು. ಆದರೆ ಶ್ರೀರಾಮಾನುಜರ ಸಿದ್ಧಾಂತದ ಗಾಢ ಅಧ್ಯಯನ ಮಾಡಿರುವ ಕಾರ್ಮನ್ ಎಂಬ ಪಾಶ್ಚಾತ್ಯ ವಿದ್ವಾಂಸನು ಸಾಂಪ್ರದಾಯಿಕವಾಗಿ ನಮಗೆ ಬಂದಿರುವ ಜೀವನ ಚರಿತ್ರೆಗಳ ಮತ್ತು ತತ್ಕಾಲೀನ ಇತಿಹಾಸದ ಕೆಲವೊಂದು ಅಂಶಗಳ ಆಧಾರದಮೇಲೆ ಅವರ ಜೀವಿತಾವಧಿ ಕೇವಲ ೮೦ ವರ್ಷವೆಂದೂ ಮತ್ತು ಅವರು ಕ್ರಿ.ಶ. ೧೦೭೭ರಿಂದ ೧೧೫೭ರವರೆಗೆ ಜೀವಿಸಿದ್ದರೆಂದೂ ತಿಳಿಸುತ್ತಾನೆ. ಹೆಸರಾಂತ ವೈದಿಕ ಬ್ರಾಹ್ಮಣರಾದ ಆಸುರಿ ಕೇಶವ ದೀಕ್ಷಿತ ಮತ್ತು ಅವರ ಪತ್ನಿ ಕಾಂತಿಮತಿಯವರ ಪುತ್ರನಾಗಿ ರಾಮಾನುಜರು ಜನ್ಮ ತಾಳಿದರು. ಅವರ ತಂದೆ ಯಾಜ್ಞಿಕ ಕ್ರಿಯೆಗಳಲ್ಲಿ ಪಡೆದಿದ್ದ ನಿಪುಣತೆಯ ಸಂಕೇತವಾಗಿ ಅವರಿಗೆ ಸರ್ವಕ್ರತು (ಎಲ್ಲ ಬಗೆಯ ಯಜ್ಞಗಳನ್ನೂ ಮಾಡುವವರು) ಎಂಬ ಬಿರುದನ್ನು ವೈದಿಕ ವಿದ್ವಾಂಸರು ಅವರಿಗೆ ನೀಡಿದ್ದರು. ಅವರು ವಾಸವಾಗಿದ್ದುದು ಇಂದಿನ ಆಧುನಿಕ ನಗರವಾದ ಚೆನ್ನೈನ ನೈಋತ್ಯ ದಿಕ್ಕಿಗೆ ಮೂವತ್ತು ಮೈಲುಗಳ ದೂರದಲ್ಲಿರುವ ಶ್ರೀಪೆರುಂಬುದೂರ್ ಎಂಬ ಗ್ರಾಮ ದಲ್ಲಿ. ಅಲ್ಲಿನ ಆದಿಕೇಶವ ಪೆರುಮಾಳ್ ದೇವಸ್ಥಾನವು ಹಿಂದಿನಿಂದಲೂ ಇತ್ತು. ಆ ದೇಗುಲದ ಪ್ರಾಂಗಣದಲ್ಲಿ ಕೈಮುಗಿದು ಕೊಂಡು ಕುಳಿತಿರುವ ಪ್ರಭುವಿನ ಪ್ರಥಮ ಸೇವಕ ಯತಿರಾಜರ ದಿವ್ಯ ವಿಗ್ರಹದ ಸನ್ನಿಧಿಯನ್ನು ನಾವು ಇಂದೂ ಕಾಣಬಹುದು. ಶ್ರೀರಾಮನುಜರಿಗೆ 'ಯತಿರಾಜ'ರೆಂದೇ ಹೆಸರು. ಅವರು ಯತಿ ವರೇಣ್ಯರೇ ಹೌದು.

ವಿವಾಹವಾಗಿ ಹಲವಾರು ವರ್ಷಗಳಾದರೂ ಸಂತತಿಯೇ ಇಲ್ಲದ ಕಾರಣ ಭಗವಂತನನ್ನು ಒಲಿಸಿ ಮಕ್ಕಳನ್ನು ಪಡೆಯುವ ಹಂಬಲದಿಂದ ಪುಣ್ಯಕ್ಷೇತ್ರವೊಂದರಲ್ಲಿ ವೈದಿಕಯಜ್ಞವೊಂದನ್ನು ಆಚರಿಸಲು ಕೇಶವ ದೀಕ್ಷಿತರು ಸಂಕಲ್ಪಿಸಿದರು. ಆ ಉದ್ದೇಶದಿಂದ ಅವರು ಪತ್ನೀಸಮೇತರಾಗಿ ತಿರು-ಅಲ್ಲಿ-ಕೇಣಿ (ನೈದಿಲೆಯ ಕೊಳ) ಎಂಬ ಪುಣ್ಯಕ್ಷೇತ್ರದಲ್ಲಿರುವ ಪವಿತ್ರ ಪಾರ್ಥಸಾರಥಿ ಸ್ವಾಮಿಯ ದೇಗುಲಕ್ಕೆ ಹೋದರು. ಆ ಸ್ಥಳಕ್ಕೆ ಈಗ 'ಟ್ರಿಪ್ಲಿಕೇನ್' ಎಂದು ಕರೆಯಲಾಗುತ್ತದೆ. ಅವರ ತಪೋನುಷ್ಠಾನದ ಸಮಯದಲ್ಲಿಯೇ ಅವರಿಗೆ ಸ್ವಪ್ನದಲ್ಲಿ ಭಗವಂತನ ಆದೇಶ ದೊರಕಿತು : "ಓ ಸರ್ವಕ್ರತುವೇ, ನಾನು ನಿನ್ನ ಧಾರ್ಮಿಕ ಆಚರಣೆಗಳಿಂದ ಮತ್ತು ನಿತಾಂತ ಭಕ್ತಿಯಿಂದ ಸುಪ್ರೀತನಾಗಿದ್ದೇನೆ. ಕಾತರಿಸದಿರು. ನಾನೇ ನಿನ್ನ ಪುತ್ರನಾಗಿ ಜನ್ಮತಾಳುತ್ತೇನೆ. ಈ ಕಾಲದ ಹಲವು ಮನುಜರು ದುಷ್ಟ ಉದ್ದೇಶಗಳಿಂದ ಕೂಡಿದ್ದು ಶಾಸ್ತ್ರೋಪದೇಶದ ನಿಜವಾದ ಮರ್ಮವನ್ನು ಅರಿಯಲು ಅಸಮರ್ಥರಾಗಿ ತಮ್ಮನ್ನೇ 'ದೇವರು' ಎಂದು ತಿಳಿದುಕೊಂಡು, ಅಹಂಕಾರದಿಂದ ಮತ್ತ ರಾಗಿಯೂ, ದುಷ್ಟರಾಗಿಯೂ, ಹಠಮಾರಿಗಳಾಗಿಯೂ ವರ್ತಿಸು ತ್ತಿದ್ದಾರೆ. ನಾನು ಒಬ್ಬ ಆಚಾರ್ಯನಾಗಿ ಹುಟ್ಟಿ ಬಾರದಿದ್ದರೆ ಅವರೆಲ್ಲಾ ನಾಶವಾಗಿ ಹೋಗುವರು. ನಿನ್ನ ಪತ್ನಿಯೊಡನೆ ನೀನು ಸ್ವಗೃಹಕ್ಕೆ ಹಿಂದಿರುಗು. ನಿನ್ನ ಕೋರಿಕೆಗಳೆಲ್ಲವೂ ಈಡೇರುವುವು."

ಭಗವಂತನ ಈ ಆಶ್ವಾಸನೆಯಂತೆ ಆ ದಂಪತಿಗಳಿಗೆ ಶಿಶುವೊಂದು ಜನಿಸಿತು. ಮಹಾವಿಷ್ಣುವಿನ ದಿವ್ಯ ಚಿಹ್ನೆಗಳನ್ನು ಹೊಂದಿದ್ದ ಆ ಶಿಶುವಿಗೆ 'ರಾಮಾನುಜ' ಅಂದರೆ ರಾಮನ ಸಹೋದರನಾದ ಲಕ್ಷ್ಮಣನ ಹೆಸರನ್ನು ಇಡಲಾಯಿತು. 'ಲಕ್ಷ್ಮಣ'ನೂ ಕೂಡ ವಿಷ್ಣುವಿನ ಒಂದು ಅಂಶ. ಅವನು ಆದಿಶೇಷ, ಪರಮಾತ್ಮನ ಕಿಂಕರರಲ್ಲಿ (ಶೇಷರು), ಮೊದಲಿಗ. ಅವನೇ ಶ್ರೀರಾಮಾವತಾರ ದಲ್ಲಿ ಶ್ರೀರಾಮನಿಗೆ ಸೇವೆ ಸಲ್ಲಿಸಲು ಲಕ್ಷ್ಮಣನಾಗಿ ಹುಟ್ಟಿ ಬಂದಿದ್ದ. ಆ ಆದಿಶೇಷನೇ ಈಗ ಈ ದಿವ್ಯ ಶಿಶುವಾಗಿ ಜನಿಸಿದ.

## ಶ್ರೀಪೆರಂಬುದೂರಿನ ವಾಸ್ತವ್ಯ

ತಮ್ಮ ಬಾಲ್ಯದಿಂದಲೇ ಶ್ರೀರಾಮನುಜರು ಪ್ರಗಾಢ ಬುದ್ಧಿ ಮತ್ತೆಯ ಚಿಹ್ನೆಗಳನ್ನು ತೋರ್ಪಡಿಸುತ್ತಿದ್ದರು. ತಮ್ಮ



ಉಪಾಧ್ಯಾಯರು ಹೇಳಿಕೊಟ್ಟ ಪಾಠಗಳೆಲ್ಲವನ್ನೂ ಒಂದು ಸಲ ಕೇಳಿ ಮೊದಲೇ ಕಲಿಯುತ್ತಿದ್ದರು. ಬೆಳೆದಂತೆ ಸುಪ್ತವಾಗಿದ್ದ ಇವರ ದಿವ್ಯಭಕ್ತಿಯು, ಇತರ ಭಕ್ತರ ಮೇಲೆ ಇವರಿಗಿದ್ದ ಅಪ್ರತಿಮ ಆಕರ್ಷಣೆಯ ರೂಪದಲ್ಲಿ ವ್ಯಕ್ತವಾಗುತ್ತಿತ್ತು. ಕಾಂಚೀಪೂರ್ಣ ಎನ್ನುವವರು ಆ ಕಾಲದ ಒಬ್ಬ ಮಹಾನ್ ಭಕ್ತ. ಅವರು ನೆರೆಯ ಗ್ರಾಮವಾದ ಪೊನ್ನಮಲೆಯಲ್ಲಿನ ತಮ್ಮ ಮನೆಯಿಂದ, ಕಾಂಚೀಪುರದ ಶ್ರೀವರದರಾಜಸ್ವಾಮಿಯ ವಿಗ್ರಹವನ್ನು ಆರಾಧಿಸಲು ನಡೆದೇ ಹೋಗುತ್ತಿದ್ದರು. ಅವರು ಶ್ರೀಪೆರಂಬುದೂರಿನಲ್ಲಿ ರಾಮಾನುಜರ ಮನೆಯ ಬದಿಯಲ್ಲಿಯೇ ಹೋಗಬೇಕಾಗುತ್ತಿತ್ತು. ರಾಮಾನುಜರು ಅವರೊಡನೆ ಸ್ನೇಹ ಬೆಳೆಸಿ, ಒಂದು ಸಂಜೆ ತಮ್ಮ ಮನೆಗೆ ಔತಣಕ್ಕೆ ಆಮಂತ್ರಿಸಿದರು. ಆದರೆ ನಿಮ್ನವರ್ಗಕ್ಕೆ ಸೇರಿದ್ದ ಕಾಂಚೀಪೂರ್ಣರು ಬಹಳ ಹಿಂಜರಿದರು. ಕಡೆಗೆ ಬಹಳ ಒತ್ತಾಯದ ಮೇರೆಗೆ ಒಪ್ಪಿಕೊಂಡರು. ರಾಮಾನುಜರ ಮನೆಯಲ್ಲಿ ಅವರಿಗೆ ಮೃಷ್ಟಾನ್ನ ಭೋಜನ ವಾಯಿತು. ನಂತರ, ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಅವರ ಪಾದಸೇವೆ ಮಾಡಲು ರಾಮಾನುಜರು ಇಚ್ಛಿಸಿದರು. ಆದರೆ ಉತ್ತಮ ಜಾತಿಯ ವೈದಿಕ ಬ್ರಾಹ್ಮಣರಾದ ರಾಮಾನುಜರ ಸೇವೆಯನ್ನು ಕಾಂಚೀಪೂರ್ಣರು ಹೇಗೆ ತಾನೆ ಸ್ವೀಕರಿಸಿಯಾರು? ಅವರ ಆಕ್ಷೇಪಕ್ಕೆ ರಾಮಾನುಜರು ಹೀಗೆ ಉತ್ತರಿಸಿದರು: "ದಯಮಾಡಿ ಅಪ್ಪಣೆ ಕೊಡಿಸಬೇಕು. ಬರಿಯ ಯಜ್ಞೋಪವೀತ ಧಾರಣೆಯೇ ಒಬ್ಬನನ್ನು ಬ್ರಾಹ್ಮಣನನ್ನಾಗಿ ಮಾಡುವುದೇನು? ಭಗವಂತನಲ್ಲಿ ಭಕ್ತಿಯುಳ್ಳವನೇ ಬ್ರಾಹ್ಮಣನಲ್ಲವೇ?" ಶ್ರೀರಾಮನುಜರು ತಮ್ಮ ಬಾಲ್ಯದಿಂದಲೆ ಜಾತಿಮತಗಳ ಗಡಿಗಳನ್ನು ದಾಟಿದ ಉದಾತ್ತ ಆಧ್ಯಾತ್ಮಿಕತೆಯನ್ನು ಬೆಳೆಸಿಕೊಂಡು ಬಂದಿದ್ದರು ಎಂಬುದನ್ನು ಈ ಘಟನೆಯು ಸೂಚಿಸುತ್ತದೆ.

### ಯಾದವಪ್ರಕಾಶರ ಬಳಿ ಶಿಷ್ಯತ್ವ

ಹದಿನೈದು ವರ್ಷ ವಯಸ್ಸಿನವರಾಗಿದ್ದಾಗ ರಾಮಾನುಜರಿಗೆ ವಿವಾಹವಾಯಿತು. ಅದಾಗಿ ಒಂದು ತಿಂಗಳಲ್ಲಿಯೇ ಅವರ ತಂದೆ ತೀರಿಕೊಂಡರು. ಇಡೀ ಕುಟುಂಬವೇ ದುಃಖದಲ್ಲಿ ಮುಳುಗಿತು. ಈ ದುರ್ಘಟನೆಯ ನೆನಪಿನಿಂದ ದೂರವಾಗಲು ಮತ್ತು ರಾಮಾನುಜರ ಉನ್ನತ ಶಿಕ್ಷಣಕ್ಕಾಗಿ ಅವಕಾಶ ಮಾಡಿಕೊಡಲು ಇಡೀ ಕುಟುಂಬವು ಸಮೀಪದಲ್ಲಿಯೇ ಇದ್ದ ಪ್ರಖ್ಯಾತ ಕ್ಷೇತ್ರವಾದ ಕಾಂಚೀಪುರಕ್ಕೆ ತನ್ನ ವಾಸ್ತವ್ಯವನ್ನು ಬದಲಾಯಿಸಿತು. ರಾಮಾನುಜರು ವಿದ್ವಾಂಸರಾಗಿದ್ದ ತಮ್ಮ ತಂದೆಯವರ ಬಳಿ ಈಗಾಗಲೇ ಸಂಸ್ಕೃತ, ವೇದಪಾಠಗಳನ್ನು ಕಲಿತು ವಿದ್ಯಾಸಂಪನ್ನರಾಗಿದ್ದರು. ಈಗ ಪ್ರೌಢ ತತ್ತ್ವಶಾಸ್ತ್ರದ ಅಧ್ಯಯನದಲ್ಲಿ, ಅದರಲ್ಲೂ ವೇದಾಂತದ ಅಭ್ಯಾಸದಲ್ಲಿ ಅವರು ಆಸಕ್ತರಾಗಿದ್ದರು. ಕಾಂಚಿಯಲ್ಲಿನ ಹೆಸರಾಂತ ತತ್ತ್ವವೇತ್ತರಾದ ಯಾದವಪ್ರಕಾಶರು ಅದ್ವೈತ ಸಿದ್ಧಾಂತದ ಪ್ರತಿಪಾದಕರಾಗಿದ್ದರು. ಅದ್ವೈತ ವೇದಾಂತದಲ್ಲಿ ಅವರ ಮಾತೇ ಪ್ರಮಾಣ. ಅವರು ರಾಮಾನುಜರಂತಹ ಅದ್ಭುತ ಮೇಧಾವಿಯು ತಮಗೆ ಶಿಷ್ಯನಾಗಿ ದೊರೆತುದಕ್ಕಾಗಿ ಹಿಗ್ಗಿದರು. ರಾಮಾನುಜರೂ ಸಹ ತಮ್ಮ ಶಿಷ್ಯೋಚಿತ ಕರ್ತವ್ಯಗಳಾದ ಗುರುಸೇವೆ ಮತ್ತು ಗುರೂಪದೇಶಗಳ ಏಕಾಗ್ರ ಅಧ್ಯಯನಗಳನ್ನು ಕೈಗೊಂಡರು. ಯಾದವಪ್ರಕಾಶರೂ ತಮ್ಮ ಶಿಷ್ಯನನ್ನು ಬಹಳವಾಗಿ ಪ್ರೀತಿಸುತ್ತ, ತಮ್ಮ ಬಳಿ ಅಧ್ಯಯನ ಮಾಡುತ್ತಿದ್ದವರ ಮಧ್ಯೆ ಇವರಿಗೇ ಅಗ್ರಸ್ಥಾನವನ್ನು ಕೊಟ್ಟಿದ್ದರು.

### ಯಾದವರೊಡನೆ ಭಿನ್ನಾಭಿಪ್ರಾಯ

ಶಿಷ್ಯ ಮತ್ತು ಗುರುವಿನ ನಡುವೆ ಸಮಯ ಕಳೆದಂತೆ ಪರತತ್ತ್ವದ ಸೈದ್ಧಾಂತಿಕ ನಿರೂಪಣೆಯಲ್ಲಿ ತಾತ್ತ್ವಿಕ ಭಿನ್ನಾಭಿಪ್ರಾಯ ನಿಧಾನವಾಗಿ ತಲೆದೋರಿತು. ಸಗುಣರೂಪೀ ಭಗವಂತನ ಮೇಲಿನ ಭಕ್ತಿಯು ರಾಮಾನುಜರಲ್ಲಿ ಸಹಜವಾಗಿತ್ತು. ಆದರೆ ಯಾದವರು ಅಂತಹ ಭಗವಂತನ ಸಗುಣ ಸಾಕಾರದ ರೂಪವನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. 'ಯಾದವೀಯ ಸಿದ್ಧಾಂತ' ಎಂದು ಕರೆಯಲ್ಪಡುವ ಅದ್ವೈತವಾದವು ಭೇದಾಭೇದವಾದದ ಒಂದು ಪ್ರಕಾರ ಮಾತ್ರ. ಅದು ಶ್ರೀಶಂಕರಾಚಾರ್ಯರ ಅದ್ವೈತ ಸಿದ್ಧಾಂತಕ್ಕಿಂತ ತೀರ ಭಿನ್ನವಾದುದು. ಯಾದವರ ಪ್ರಕಾರ ಪರಿವರ್ತನಶೀಲ ಮತ್ತು ಆತ್ಯಂತಿಕವಾಗಿ ಲಯವಾಗುವ ಈ ಜಗತ್ತು ಬ್ರಹ್ಮನ ವಿಶ್ವರೂಪವಾಗಿದೆ. ಈ ರೂಪವು ಸತ್ಯವಾದದ್ದು, ಬರಿಯ ತೋರಿಕೆಯದ್ದಲ್ಲ. ಇದರ ಹಿಂದೆ, ಕಾಲ-ದೇಶ-ಕಾರಣಾತೀತವಾದ ಪರಮತತ್ತ್ವವಿದೆ. ಇದನ್ನು ನಾವು ಅರಿತು ಸಾಕ್ಷಾತ್ಕರಿಸಿಕೊಳ್ಳಬೇಕು. ರಾಮಾನುಜರು ತಮ್ಮ ಜೀವನದ ಪ್ರೌಢಕಾಲದಲ್ಲಿ, ಈ ಸಿದ್ಧಾಂತವು ಮಾಯಾವಾದಕ್ಕಿಂತಲೂ ಹೇಯವಾದುದೆಂದು ಕಟುವಾಗಿ ಟೀಕಿಸಿದರು. ಈ ಬಗೆಯ ಬ್ರಹ್ಮನನ್ನು ಅವರು, ಒಂದು ಕಡೆ ಪ್ರೀತಿಸಲ್ಪಟ್ಟು ಅಲಂಕರಿಸಿಕೊಳ್ಳುತ್ತಿರುವ ಮತ್ತು ಇನ್ನೊಂದು ಕಡೆ ಸುಡಿಸಿಕೊಂಡು ನೋಯುತ್ತಿರುವ ಒಬ್ಬ ವ್ಯಕ್ತಿಯ ವಿಚಿತ್ರ ಅವಸ್ಥೆಗೆ ಹೋಲಿಸುತ್ತಾರೆ. ಆದರೆ ಈ ಬಗೆಯ ತಾತ್ತ್ವಿಕ ಭಿನ್ನಾಭಿಪ್ರಾಯಗಳು ಆ ಕಾಲದಲ್ಲಿ ಸ್ಪಷ್ಟವಾಗಿರಲಿಲ್ಲ. ಯಾದವರು ಅದ್ವೈತ ಸಿದ್ಧಾಂತದ ಪ್ರಮಾಣಭೂತ ವ್ಯಕ್ತಿಯೆಂದೇ ಪರಿಗಣಿಸಲ್ಪಟ್ಟಿದ್ದರು.

ರಾಮಾನುಜರು ತಮ್ಮನ್ನು ತಾವು ಎಷ್ಟೇ ನಿಯಂತ್ರಿಸಿಕೊಂಡರೂ ದೃಷ್ಟಿಕೋನದಲ್ಲಿ ಕಂಡು ಬಂದ ಈ ಮೂಲಭೂತ ವ್ಯತ್ಯಾಸವು ಬಾಹ್ಯದಲ್ಲಿ ವ್ಯಕ್ತವಾಗುತ್ತಾ ಹೋಯಿತು. ಒಂದು ದಿನ ರಾಮಾನುಜರು ಯಾದವರಿಗೆ ಎಣ್ಣೆಯನ್ನು ಸವರಿ,ನೀವುತ್ತಿದ್ದ ಸಮಯದಲ್ಲಿ, ಗುರುಗಳು ಛಾಂದೋಗ್ಯೋಪನಿಷತ್ತಿನ 'ಕಪ್ಯಾಸಮ್ ಪುಂಡರೀಕಾಕ್ಷಂ' ಎಂದು ಆರಂಭವಾಗುವ ಭಾಗವನ್ನು ವಿವರಿಸುತ್ತಿದ್ದರು. ಶಂಕರರ ವ್ಯಾಖ್ಯಾನವನ್ನು ಆಧಾರಿಸಿದ ಅವರ ವಿವರಣೆ ಹೀಗಿತ್ತು: 'ಕೋತಿಯ ಹಿಂಬದಿಯ ಪ್ರದೇಶದಂತೆ ಕೆಂಪಾದ ಬಣ್ಣವುಳ್ಳ ಕಮಲದಂತಹ ಕಣ್ಣುಗಳು.' ಭಗವಂತನ ಕಣ್ಣುಗಳನ್ನು ಪ್ರಾಣಿಯೊಂದರ ಪೃಷ್ಠಭಾಗಕ್ಕೆ ಹೋಲಿಸಿದುದನ್ನು ಕಂಡು ರಾಮಾನುಜರಿಗೆ ಸಹಿಸಲಾಗಲಿಲ್ಲ. ಅವರ ಕಣ್ಣುಗಳಿಂದ ಹರಿದ ದುಃಖಾಶ್ರುವು ಯಾದವರ ಮೇಲೆ ಬೀಳಲಾರಂಭಿಸಿತು. ಯಾದವರು ರಾಮಾನುಜರ ದುಃಖಕ್ಕೆ ಕಾರಣವನ್ನು ಕೇಳಿದರು. ಭಗವಂತನ ಕಣ್ಣುಗಳನ್ನು ಹೀಗೆ ಕೀಳಾಗಿ ವಿವರಿಸಿರುವುದರಿಂದ ತಮಗೆ ಉಂಟಾದ ಕಡು ದುಃಖವನ್ನು ರಾಮಾನುಜರು ಅವರಲ್ಲಿ ತೋಡಿಕೊಂಡಾಗ ಯಾದವರು ಆಶ್ಚರ್ಯಚಕಿತರಾದರು. ಇದಕ್ಕಿಂತಲೂ ಉತ್ತಮವಾದ ವ್ಯಾಖ್ಯಾನ ಗೊತ್ತಿದ್ದರೆ ಹೇಳುವಂತೆ ರಾಮಾನುಜರನ್ನು ಆಗ್ರಹಿಸಿದರು. ರಾಮಾನುಜರು ಆ ಸವಾಲನ್ನು ಯಶಸ್ವಿಯಾಗಿ ಎದುರಿಸಿ, ಈ ಕೆಳಗಿನ ವಿವರಣೆಯನ್ನು ಕೊಟ್ಟರು:

'ಕಮ್' ಅಂದರೆ 'ನೀರನ್ನು' ಪಿಬತಿ = ಕುಡಿಯುತ್ತಾನೆ. ನೀರನ್ನು ಕುಡಿಯುವವನು ಸೂರ್ಯ. ಹೀಗೆ ವಿವರಿಸಿದಾಗ ಆ ಪದದ ಅರ್ಥ 'ಸೂರ್ಯನ ಬೆಳಕಿನಿಂದ ಅರಳಿದ ಕಮಲವನ್ನು ಹೋಲುವ ಭಗವಂತನ ಕಣ್ಣುಗಳು' ಎಂದಾಗುತ್ತದೆ. ಯಾದವರು ರಾಮಾನುಜರ ವಿವರಣಾ ಕೌಶಲವನ್ನು ಪ್ರಶಂಸಿಸಿದಂತೆ ನಟಿಸಿದರೂ, ಇದು ಸತರ್ಕವಾದ ವ್ಯಾಖ್ಯಾನವಲ್ಲವೆಂದು ಅಭಿಪ್ರಾಯಪಟ್ಟರು. ಇನ್ನೊಂದು ದಿನ ಯಾದವರು 'ಸತ್ಯಂ ಜ್ಞಾನಂ ಅನಂತಂ ಬ್ರಹ್ಮ'—ಎಂಬ ಉಪನಿಷತ್ತಿನ ವಾಕ್ಯವನ್ನು ಉಪದೇಶಿಸುತ್ತಿದ್ದರು. ಅವರ ಪ್ರಕಾರ ಅದರ ಅರ್ಥ 'ಬ್ರಹ್ಮನು ಸತ್ಯ, ಜ್ಞಾನ ಮತ್ತು ಅನಂತ' ಎಂದು. ರಾಮಾನುಜರು ಅದಕ್ಕೆ ಆಕ್ಷೇಪಿಸಿದರು. ಇದರ ಸರಿಯಾದ ಅರ್ಥ 'ಸತ್ಯ, ಜ್ಞಾನ ಮತ್ತು ಅನಂತತೆಗಳನ್ನು ಒಳಗೊಂಡ ಬ್ರಹ್ಮ'—ಎಂದು ಹೇಳಿ, "ಆ ಗುಣಗಳು ಅವನವು, ಆದರೆ ಅವುಗಳೇ ಅವನಲ್ಲ. ಅದು ಹೇಗೆಂದರೆ ಈ ದೇಹ ನನ್ನದು. ಆದರೆ ನಾನು ದೇಹವಲ್ಲ ಎಂಬಂತೆ" ಎಂದು ವಿವರಿಸಿದರು.

ದೀರ್ಘವಾದ ತಾತ್ತ್ವಿಕ ಪರಿಣಾಮಗಳನ್ನು ಹೊಂದಿದ್ದ ಈ ಭಿನ್ನಾಭಿಪ್ರಾಯಗಳಿಂದ, ರಾಮಾನುಜರು ಕಾಲಾಂತರದಲ್ಲಿ ಒಬ್ಬ ಪೂರ್ಣ ದ್ವೈತಿಗಳಾಗುತ್ತಾರೆ ಮತ್ತು ಅದ್ವೈತದ ಕಟು ನಿಂದಕರಾಗುತ್ತಾರೆ ಎಂದು ಯಾದವರು ಭಾವಿಸಿದರು. ಹೀಗೆ ಯೋಚಿಸಿದ ಅವರು, ತಮ್ಮ ಸಿದ್ಧಾಂತಕ್ಕೆ ಮುಂದೆ ಒದಗಬಹುದಾದ ಅಪಾಯಗಳನ್ನು ತಡೆಗಟ್ಟಲು ರಾಮಾನುಜರನ್ನು ಮುಗಿಸಿಬಿಡುವುದೊಂದೇ ಮಾರ್ಗ ಎಂದು ನಿಶ್ಚಯಿಸಿದರು. ತಮ್ಮ ಇತರ ಶಿಷ್ಯರನ್ನು ವಿಶೇಷ ವಿಶ್ವಾಸಕ್ಕೆ ತೆಗೆದುಕೊಂಡು ಅವರು ಸಂಚೊಂದನ್ನು ರೂಪಿಸಿದರು. ಪವಿತ್ರ ಗಂಗಾನದಿಯಲ್ಲಿ ಸ್ನಾನ ಮಾಡುವ ಸಲುವಾಗಿ ತೀರ್ಥಯಾತ್ರೆ ಏರ್ಪಡಿಸಿ, ರಾಮಾನುಜರನ್ನು ಆ ಗುಂಪಿಗೆ ಸೇರುವಂತೆ ಪುಸಲಾಯಿಸಿ, ಒಂದು ಅನುಕೂಲವಾದ ಸ್ಥಳದಲ್ಲಿ ಅವರ ಕೊಲೆ ಮಾಡಿಸಿ, ಅದರಿಂದ ಬರುವ ಪಾಪವನ್ನು ಗಂಗಾಸ್ನಾನದಿಂದ ಕಳೆದುಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

**ಅಪಾಯದಿಂದ ರಾಮಾನುಜರ ರಕ್ಷಣೆ**

ಈ ಭೀಕರ ಉದ್ದೇಶದೊಂದಿಗೆ ತೀರ್ಥಯಾತ್ರೆಯ ಗುಂಪು ಸಾಗಿತು. ಹಲವು ದಿನಗಳ ಪ್ರಯಾಣದ ನಂತರ ಅವರುಗಳು ವಿಂಧ್ಯ ಪರ್ವತದ ತಪ್ಪಲಿನಲ್ಲಿರುವ ಗೊಂಡಾರಣ್ಯವನ್ನು ಸೇರಿದರು. ಇಲ್ಲಿಯೇ ಎಲ್ಲಾದರೂ ರಾಮಾನುಜರನ್ನು ಹತ್ಯೆಗೈಯಬೇಕು ಎಂಬುದೇ ಅವರಿಗಿದ್ದ ಯೋಚನೆ. ಆದರೆ ರಾಮಾನುಜರು ತಮ್ಮ ನಿಕಟ ಬಂಧು ಮತ್ತು ಸಹಶಿಷ್ಯ ಗೋವಿಂದನಿಂದ ಕಡೆಯ ಗಳಿಗೆಯಲ್ಲಿ ಈ ಸಂಚಿನ ಸುಳಿವನ್ನು ಪಡೆದು, ಅಲ್ಲಿಂದ ಪಲಾಯನಗೈಯಲು ಶಕ್ತರಾದರು. ಸಂಜೆಯವರೆಗೂ ಆ ಅರಣ್ಯದಲ್ಲಿ ವೇಗವಾಗಿ ನಡೆದು, ವಿಪರೀತ ಆಯಾಸಗೊಂಡು, ಒಂದು ಮರದ ಕೆಳಗೆ ಕುಳಿತು ವಿಶ್ರಮಿಸಿದರು. ಸ್ವಲ್ಪ ಸಮಯದಲ್ಲಿಯೇ ಬೇಟೆಗಾರರಂತಿದ್ದ ದಂಪತಿಗಳು ಅಲ್ಲಿಗೆ ಬಂದು ಅವರಿಗೆ ಆರೈಕೆ ಮಾಡಿದರು. "ನಾವು ರಾಮೇಶ್ವರ ಯಾತ್ರೆಗಾಗಿ ದಕ್ಷಿಣದ ಕಡೆ ಹೋಗುತ್ತಿದ್ದೇವೆ" ಎಂದ ಅವರು ರಾಮಾನುಜರನ್ನು ರಾತ್ರಿಯ ವಿಶ್ರಾಂತಿಗಾಗಿ ಯೋಗ್ಯ ಸ್ಥಳವೊಂದಕ್ಕೆ ಕರೆದುಕೊಂಡು ಹೋಗಿ, ಬೆಳಗಿನ ಜಾವ ಸಮೀಪದಲ್ಲಿಯೇ ಇರುವ ಒಂದು ಬಾವಿಗೆ, ಸ್ನಾನ-ಪಾನಾದಿಗಳನ್ನು ಮಾಡಲು ಕರೆದೊಯ್ಯುತ್ತೇವೆಂದು ಆಶ್ವಾಸನೆಯಿತ್ತರು. ಮರುದಿನ ಬೆಳಗ್ಗೆ ದಂಪತಿಗಳು ತೋರಿಸಿದ ಬಾವಿಯಲ್ಲಿ ಇಳಿದು ರಾಮಾನುಜರು, ಅದರಲ್ಲಿನ ಸಿಹಿಯಾದ ಮತ್ತು ತಂಪಾದ ನೀರನ್ನು ಕುಡಿದು ಆ ಬೇಡರ ದಂಪತಿಗಳಿಗಾಗಿ ಸ್ವಲ್ಪ ನೀರನ್ನು ಹಿಡಿದು ತಂದರು. ಆದರೆ ಆಶ್ಚರ್ಯವೋ ಆಶ್ಚರ್ಯ! ಕಾಡಿನ ಬದಲಾಗಿ, ರಾಮಾನುಜರು ತಮ್ಮ ಸುತ್ತಲೂ ದೇವಾಲಯಗಳ ಗೋಪುರಗಳನ್ನೂ, ಮನೆಗಳ ಸಮೂಹವನ್ನೂ ಕಂಡರು. ತಾವೆಲ್ಲಿದ್ದೇವೆ ಎಂದು ತಿಳಿಯದೆ ದಾರಿಹೋಕನೊಬ್ಬನನ್ನು ಈ ಸ್ಥಳ ಯಾವುದೆಂದು ವಿಚಾರಿಸಿದರು. ಅವರು ತಬ್ಬಿಬ್ಬಾಗುವಂತಹ ಆಶ್ಚರ್ಯ ಕಾದಿತ್ತು! ಇದು ಕಾಂಚೀಪುರವೆಂದು ಆ ದಾರಿಹೋಕ ಹೇಳಿದ. ತಮ್ಮದೇ ಊರಿಗೆ ಅವರು ಬಂದಿದ್ದರು. ನಿದ್ರೆಯಿಂದ ಎಚ್ಚೆತ್ತಂತೆ ಭಾಸವಾಯಿತು ಅವರಿಗೆ. ತಮಗೆ ಚಿರಪರಿಚಿತವಾಗಿದ್ದ ಕಾಂಚೀಪುರವು ಇದೇ ಎಂದು ಗುರುತಿಸಿದರು. ಅನಂತರ ಅವರು ತಮ್ಮ ಬಂಧುಗಳ ಕಡೆಗೆ ಹೋದರು. ಆದರೆ, ತಮ್ಮ ವಿರುದ್ಧ ಗುರುಗಳು ಹೂಡಿದ್ದ ಸಂಚಿನ ಬಗ್ಗೆ ಯಾರಿಗೂ ಏನನ್ನೂ ಹೇಳಲಿಲ್ಲ. ಅದಕ್ಕೆ ಬದಲಾಗಿ, ಯಾದವಪ್ರಕಾಶರು ಮತ್ತು ಅವರ ಗುಂಪು ಕೆಲವು ತಿಂಗಳ ಅನಂತರ ತಿರುಗಿ ಬಂದಾಗ ಅವರ ಗುರುಕುಲಕ್ಕೇ ಮತ್ತೆ ಸೇರಿಕೊಂಡು, ತಮ್ಮ ಅಧ್ಯಯನವನ್ನು ಮತ್ತು ಗುರುಸೇವೆಯನ್ನು ಶ್ರದ್ಧಾ ಭಕ್ತಿಗಳಿಂದ ಮುಂದುವರಿಸಿದರು.

ಯಾದವಪ್ರಕಾಶರಿಗೆ ರಾಮಾನುಜರನ್ನು ಕಂಡೊಡನೆಯೇ ಗಾಬರಿಯಾಯಿತು. ರಾಮಾನುಜರು ಅದೃಶ್ಯರಾದ ಮೇಲೆ, ಅವರು ಮರಣ ಹೊಂದಿರಬಹುದೆಂದು ಭಾವಿಸಿದ್ದರು. ರಾಮಾನುಜರ ಎಂದಿನ ವಿನಯವನ್ನು ಕಂಡು, ತಮ್ಮ ದುಷ್ಟ ಸಂಚಿನ ಬಗ್ಗೆ ಈತನಿಗೆ ಏನೂ ಗೊತ್ತಿಲ್ಲವೆಂದು ಭಾವಿಸಿದರು. ರಾಮಾನುಜರೊಂದಿಗೆ ಪ್ರೇಮದಿಂದ ವ್ಯವಹರಿಸುತ್ತ ವೇದಾಂತ ಶಿಕ್ಷಣವನ್ನು ಪುನಃ ಆರಂಭಿಸಿದರು. ಆದರೆ ಅವರಿಬ್ಬರ ಮಧ್ಯೆ ವಿವರಣೆಗಳಲ್ಲಿ ಭಿನ್ನಾಭಿಪ್ರಾಯ ಉತ್ಪನ್ನವಾಗುತ್ತಲೇ ಇತ್ತು. ಇಷ್ಟಾಗಿಯೂ ಅವರಿಬ್ಬರ ಸಹಜ ತಾತ್ತ್ವಿಕ ದೃಷ್ಟಿಗಳು ಒಂದುಗೂಡುತ್ತಲೇ ಇರಲಿಲ್ಲ. ಒಂದು ದಿನ ಯಾದವಪ್ರಕಾಶರು 'ಸರ್ವಂ ಖಲ್ವಿದಂ ಬ್ರಹ್ಮ' 'ನೇಹ ನಾನಾಸ್ತಿ ಕಿಂಚನ'—"ಎಲ್ಲವೂ ಬ್ರಹ್ಮವೇ, ಯಾವ ಬಗೆಯ ವಿವಿಧತೆಯೂ ಇಲ್ಲಿ ಇಲ್ಲ" ಎಂಬ ಉಪನಿಷದ್ ವಾಕ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದರು. ಅವರು ಅದನ್ನು ವಿವರಿಸುವಾಗ 'ಆತ್ಮ' ಮತ್ತು 'ಬ್ರಹ್ಮ' ಇವೆರಡರ ಐಕ್ಯವನ್ನು ಪ್ರತಿಪಾದಿಸುತ್ತಿದ್ದರು. ರಾಮಾನುಜರು ಇದಕ್ಕೆ ಒಪ್ಪದೆ ಇದರ ಮುಂದಿನ ವಾಕ್ಯವಾದ 'ತಜ್ಜಲಾನ್ ಇತಿ ಶಾಂತ ಉಪಾಸೀತ' (ಈ ವಿಶ್ವದ ಸೃಷ್ಟಿ, ಪಾಲನೆ ಮತ್ತು ಲಯ ಬ್ರಹ್ಮನಲ್ಲಿಯೇ) ಎಂಬ ವಾಕ್ಯವು ಇರದಿದ್ದರೆ, ಎಲ್ಲ ವಸ್ತುಗಳಲ್ಲಿ ಬ್ರಹ್ಮನ ಐಕ್ಯವನ್ನು ಹೇಳಬಹುದಿತ್ತು. ಆದರೆ ಮುಂದಿನ ಆ ವಿಶೇಷಣ ವಾಕ್ಯವು ಮೊದಲ ವಾಕ್ಯವನ್ನು ಹೀಗೆ ಅರ್ಥೈಸುತ್ತದೆ: "ಈ ಸಂಸಾರದ ಎಲ್ಲಾ ವಸ್ತುಗಳೂ ಬೇರೆ ಬೇರೆಯಾಗಿ ಅಸ್ತಿತ್ವವನ್ನು ಪಡೆದಿಲ್ಲ. ಅವೆಲ್ಲವೂ ದಾರದಲ್ಲಿ ಪೋಣಿಸಿದ ಮಣಿಗಳಂತೆ ಇವೆ. ಅವೆಲ್ಲವನ್ನೂ ಕೂಡಿಸಿರುವುದು ಪರಬ್ರಹ್ಮ. ಆ ತತ್ತ್ವವೇ, ಅವುಗಳ ವೈವಿಧ್ಯತೆಯನ್ನು ವಿನಾಶಗೊಳಿಸದೆ ಏಕಸೂತ್ರದಲ್ಲಿ ಇಟ್ಟಿದೆ" ಎಂದು ವಾದಿಸಿದರು. ರಾಮಾನುಜರ ಈ ವ್ಯಾಖ್ಯಾನದಿಂದ ಯಾದವಪ್ರಕಾಶರ ಕೋಪ ನೆತ್ತಿಗೇರಿತು. ತಮ್ಮ ಗುರುಕುಲದಿಂದ ಹೊರಹೋಗುವಂತೆ ರಾಮಾನುಜರಿಗೆ ಅವರು ಆದೇಶವಿತ್ತರು. ಗುರುಗಳ ಆಜ್ಞೆಯನ್ನು ಶಿರಸಾವಹಿಸಿದ ರಾಮಾನುಜರು, ಬಹು ಗೌರವದಿಂದ ಅವರ ಪಾದಗಳಿಗೆ ನಮಸ್ಕರಿಸಿ, ಬೀಳ್ಕೊಂಡರು.

### ಶ್ರೀವೈಷ್ಣವ ಸಂಪ್ರದಾಯದ ಕಡೆ ಒಲವು

ಇದು ರಾಮಾನುಜರ ಜೀವಿತ ಕಾಲದಲ್ಲಿ ಅತ್ಯಂತ ಪ್ರಮುಖವಾದ ಹಂತ. ಶ್ರೀವೈಷ್ಣವ ಸಂಪ್ರದಾಯದ ಪ್ರಕಾರ ರಾಮಾನುಜರು ಯಾದವಪ್ರಕಾಶರಿಂದ ಬೇರ್ಪಟ್ಟಿದ್ದು ಮಹಾಮೇಧಾವಿಗಳೂ ಮಹಾತ್ಮರೂ ಆದ ಯಾಮುನಾಚಾರ್ಯರ ಪ್ರಾರ್ಥನೆಯ ಫಲವಾಗಿಯೇ. ಅವರು ಶ್ರೀರಂಗದಲ್ಲಿ ಅಂದಿನ ಶ್ರೀವೈಷ್ಣವ ಪಂಗಡದ ನೇತಾರರಾಗಿದ್ದರು. ರಾಮಾನುಜರು ತಮಗೆ ಯೋಗ್ಯ ಉತ್ತರಾಧಿಕಾರಿ ಎಂದು ಭಕ್ತರಿಂದ ಕೇಳಿ ತಿಳಿದು, ಯಾಮುನರು ಅವರನ್ನು ಭೇಟಿಯಾಗಲು ಕಾಂಚೀಪುರಕ್ಕೆ ಬಂದರು. ಆದರೆ, ರಾಮಾನುಜರು ತಮ್ಮ ಮತದ ದ್ವೇಷಿಯಾದ ಯಾದವಪ್ರಕಾಶರ ಬಳಿ ನೆಲೆಸಿರುವುದನ್ನು ಕಂಡು ದೂರದಿಂದಲೇ ಅವರನ್ನು ನೋಡಿದರು. ಅನಂತರ ಅವರು ರಾಮಾನುಜರ ಮನವನ್ನು ಸರಿಯಾದ ಮಾರ್ಗದಲ್ಲಿ ಹರಿಸುವಂತೆಯೂ ಅವರಿಗೆ ಶ್ರೀವೈಷ್ಣವ ಪಂಥದ ನಾಯಕತ್ವವನ್ನು ದೊರಕಿಸಿಕೊಡುವಂತೆಯೂ ಕಾಂಚಿಯ ವಿಷ್ಣುಮಂದಿರದ ಆರಾಧ್ಯ ದೈವವಾದ ಭಗವಾನ್ ವರದರಾಜ ಸ್ವಾಮಿಯಲ್ಲಿ ಪ್ರಾರ್ಥಿಸಿಕೊಂಡರು. ಆ ಮಹಾಭಕ್ತನ ವಿನಂತಿಗೆ ಉತ್ತರವಾಗಿ ಹಾಗೂ ಭಗವಂತನ ಪ್ರೇರಣೆಯ ಫಲವಾಗಿ ರಾಮಾನುಜರು ಯಾದವಪ್ರಕಾಶರಿಂದ ದೂರಸರಿದು, ಶ್ರೀವೈಷ್ಣವ ಭಕ್ತರ ಸತ್ಸಂಗವನ್ನು ಬಯಸಲಾರಂಭಿಸಿ ಶ್ರೀವರದರಾಜಸ್ವಾಮಿಯ ದೇವಸ್ಥಾನದಲ್ಲಿ ಸೇವೆ ಸಲ್ಲಿಸಲಾರಂಭಿಸಿದರು.

ಪೊನ್ನಮಲೆಯಿಂದ ಕಾಂಚೀಪುರಕ್ಕೆ ಶ್ರೀವರದರಾಜಸ್ವಾಮಿಯ ಸೇವೆಗಾಗಿ ಹೋಗುತ್ತಿದ್ದ ಕಾಂಚೀಪೂರ್ಣರೆಂಬ ದೊಡ್ಡ ಭಕ್ತರು ರಾಮಾನುಜರಿಗೆ ಬಾಲ್ಯದ ದಿನಗಳಿಂದಲೂ ಗೌರವಾರ್ಹರಾಗಿದ್ದರು ಎಂಬುದನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ರಾಮಾನುಜರು ಅವರನ್ನು ಸಮೀಪಿಸಿ ಅವರ ಕಾಲಿಗೆರಗಿದರು. ಕಾಂಚೀಪೂರ್ಣರು ಬೇಡ ಬೇಡವೆಂದರೂ ಕೇಳಲಿಲ್ಲ. ರಾಮಾನುಜರು ಸಂಸ್ಕೃತ ಮತ್ತು ತತ್ತ್ವಶಾಸ್ತ್ರಗಳಲ್ಲಿ ನಿಷ್ಣಾತರಾದ ಉತ್ತಮ ಜಾತಿಯ ಬ್ರಾಹ್ಮಣರಾದರೆ, ಕಾಂಚೀಪೂರ್ಣರು ಶೂದ್ರ ಜಾತಿಗೆ ಸೇರಿದವರು. ಆದರೆ, ರಾಮಾನುಜರು ತಮ್ಮ ಈ ನಡವಳಿಕೆಯನ್ನು ಸಮರ್ಥಿಸಿಕೊಂಡರು. ಅವರ ಪ್ರಕಾರ ಕಾಂಚೀಪೂರ್ಣರ ಪರಿಪೂರ್ಣ ಭಕ್ತಿಯು ಉತ್ತಮ ಜಾತಿ ಮತ್ತು ವಿದ್ವತ್ತಿಗಿಂತ ಅತ್ಯಂತ ಶ್ರೇಷ್ಠವಾದದ್ದು. ಜಾತಿ ಮತ್ತು ವಿದ್ವತ್ತುಗಳು ವ್ಯಕ್ತಿಯ ದರ್ಪ ಮತ್ತು ಅಹಂಕಾರಗಳನ್ನು ಹೆಚ್ಚಿಸುವುದಷ್ಟೇ. ಕಾಲಿಗೆರಗಿದ ಶ್ರೀರಾಮಾನುಜರಿಗೆ ಅವರ ಇಷ್ಟಾರ್ಥಸಿದ್ಧಿಗಾಗಿ ಮತ್ತು ಭಕ್ತಿವರ್ಧನೆಗಾಗಿ ಪ್ರತಿದಿನವೂ, ಸಮೀಪದ ಬಾವಿಯೊಂದರಿಂದ, ಶ್ರೀವರದರಾಜಸ್ವಾಮಿಯ ಸೇವೆಗಾಗಿ, ಒಂದು ಕೊಡ ನೀರನ್ನು ತರುವಂತೆ ಕಾಂಚೀಪೂರ್ಣರು ವಿಧಿಸಿದರು. ಅದರಂತೆಯೇ ರಾಮಾನುಜರು ಸೇವಾಕಾರ್ಯವನ್ನು ಕೈಗೊಳ್ಳುವುದರೊಂದಿಗೆ ತಮಿಳು ಭಾಷೆಯಲ್ಲಿನ ಶ್ರೀವೈಷ್ಣವ ಶಾಸ್ತ್ರಗಳ ಅಧ್ಯಯನವನ್ನೂ ಆರಂಭಿಸಿದರು.

### ಯಾಮುನರ ನಾಯಕತ್ವದ ಸ್ವೀಕಾರ

ರಾಮಾನುಜರು ಯಾದವರಿಂದ ಬೇರೆಯಾದ ಸುದ್ದಿ ಕೆಲ ಕಾಲದ ಅನಂತರ, ಆಗ ತಾನೇ ಸಾವಿನಂಚಿಗೆ ಹೋಗಿದ್ದು ತೀವ್ರ ವ್ಯಾಧಿಯಿಂದ ಚೇತರಿಸಿಕೊಳ್ಳುತ್ತಿದ್ದ ಯಾಮುನರನ್ನು, ಅವರನ್ನು ದರ್ಶಿಸಲು ಹೋಗಿದ್ದ ಕೆಲವು ಭಕ್ತರ ಮೂಲಕ ತಲುಪಿತು. ಅದು ಅವರಿಗೆ ಸಂತಸವನ್ನು ತಂದಿತು. ಕಾರಣ, ಅವರು ರಾಮಾನುಜರನ್ನು ಶ್ರೀರಂಗಕ್ಕೆ ಕರೆಸಿಕೊಳ್ಳುವಂತೆಯೂ, ಶ್ರೀವೈಷ್ಣವ ಜನಾಂಗದ ನಾಯಕತ್ವದ ಜವಾಬ್ದಾರಿಯನ್ನು ಅವರಿಗೆ ವಹಿಸಿಕೊಡುವಂತೆಯೂ, ಶ್ರೀರಂಗನಾಥಸ್ವಾಮಿಯಲ್ಲಿ ಅನುದಿನವೂ ಪ್ರಾರ್ಥಿಸುತ್ತಿದ್ದರು. ಈ ಕೋರಿಕೆಯೊಡನೆಯೇ ಅವರು ಒಂದು ದಿನ ತಮ್ಮ ಶ್ರೇಷ್ಠಕೃತಿಯಾದ ಸ್ತೋತ್ರರತ್ನವನ್ನು ಸ್ವಾಮಿಗೆ ಅರ್ಪಿಸಿದರು. ಅವರಿಗೆ ತಮ್ಮ ಕಡೆಯ ದಿನಗಳು ಸಮೀಪವಾಗುತ್ತಿದೆಯೆಂದೂ, ಅನಂತರ ತಾವು ಬೆಳೆಸಿದ ಶ್ರೀವೈಷ್ಣವ ಜನಾಂಗವು

ನಾಯಕರಹಿತವಾಗುವುದೆಂಬ ಅರಿವಿತ್ತು. ಆದ್ದರಿಂದಲೇ ರಾಮಾನುಜರ ಶ್ರದ್ಧಾಪರಿವರ್ತನೆಯ ಸುದ್ದಿಯನ್ನು ಕೇಳಿದೊಡನೆಯೇ ತಮ್ಮ ಹಿರಿಯ ಶಿಷ್ಯರಾದ ಮಹಾಪೂರ್ಣ ಎಂಬುವರನ್ನು ರಾಮಾನುಜರ ಬಳಿಗೆ ಕಳುಹಿಸಿ ಶ್ರೀರಂಗಕ್ಕೆ ಬರುವಂತೆ ಮನವೊಲಿಸಲು ಕೇಳಿಕೊಂಡರು. ನಾಲ್ಕು ದಿನಗಳ ಕಾಲ್ನಡಿಗೆಯ ನಂತರ ಮಹಾಪೂರ್ಣರು ಕಾಂಚಿಯನ್ನು ತಲುಪಿ, ತಮ್ಮ ಆಗಮನದ ಉದ್ದೇಶವನ್ನು ಭಕ್ತ ಕಾಂಚೀಪೂರ್ಣರಿಗೆ ತಿಳಿಸಿ, ಅನಂತರ ರಾಮಾನುಜರ ಬಳಿ ಹೋದರು. ಯಾಮುನರ ಆರೋಗ್ಯ ಕ್ಷೀಣಿಸುತ್ತಿದೆಯೆಂದೂ, ತಮ್ಮನ್ನು ನೋಡಲು ಅವರು ಬಯಸುತ್ತಿದ್ದಾರೆಂದೂ ತಿಳಿದ ರಾಮಾನುಜರು ಶ್ರೀವರದರಾಜ ಸ್ವಾಮಿಯ ದೇಗುಲದ ತಮ್ಮ ಕೈಂಕರ್ಯವನ್ನು ತ್ವರೆಯಿಂದ ಮುಗಿಸಿ, ಮಹಾಪೂರ್ಣರೊಡನೆ ಶ್ರೀರಂಗಕ್ಕೆ ತೆರಳಿದರು.

ನಾಲ್ಕು ದಿನಗಳ ಪ್ರಯಾಣದ ಅನಂತರ ಅವರಿಬ್ಬರೂ ಶ್ರೀರಂಗದ ಪಕ್ಕದಲ್ಲಿಯೇ ಇರುವ ತಿರುಚಿರಾಪಲ್ಲಿಯನ್ನು ಸೇರಿದರು. ಅಷ್ಟರಲ್ಲಿ ಯಾಮುನರ ಆರೋಗ್ಯ ತೀರಾ ಹದಗೆಟ್ಟು ಅವರು ದೈವಾಧೀನರಾಗಿದ್ದಾರೆಂದೂ, ಅವರ ದೇಹವನ್ನು ದಹನ ಕ್ರಿಯೆಗಾಗಿ ಕೊಂಡೊಯ್ಯಲಾಗುತ್ತಿದೆ ಎಂದೂ ತಿಳಿದುಬಂತು. ಬಹಳ ದುಃಖ ಮತ್ತು ನಿರಾಶೆಗಳಿಂದ ರಾಮಾನುಜರ ಪ್ರಜ್ಞೆ ತಪ್ಪಿತು. ಸುಧಾರಿಸಿಕೊಂಡ ನಂತರ ಆ ವೈಷ್ಣವಾಗ್ರೇಸರನ ಕಳೇಬರವನ್ನು ದರ್ಶಿಸಲು ಧಾವಿಸಿದರು. ಆಗ ಆ ಮಹಾತ್ಮರ ಬಲಗೈಯ ಮೂರು ಬೆರಳುಗಳು ಗಟ್ಟಿಯಾಗಿ ಮಡಿಸಿಕೊಂಡಿರುವುದನ್ನು ರಾಮಾನುಜರು ಗಮನಿಸಿದರು. ಇದರಲ್ಲೇನೋ ಗೂಢಾರ್ಥವಿದೆ ಎಂದು ಭಾವಿಸಿದ ಅವರು, ಬದುಕಿದ್ದಾಗಲೂ ಯಾಮುನರ ಕೈಗಳು ಹೀಗೆಯೇ ಇದ್ದವೆ ಎಂದು ಸುತ್ತಲೂ ನೆರೆದಿದ್ದ ಜನರನ್ನು ಕೇಳಿದರು. ಇಲ್ಲವೆಂಬ ಉತ್ತರ ಪಡೆದ ಅವರು ತಮ್ಮ ಆಧ್ಯಾತ್ಮಿಕ ದೃಷ್ಟಿಯಿಂದ ಬಿಗಿಹಿಡಿದ ಈ ಮೂರು ಬೆರಳುಗಳು ಯಾಮುನರ ಮೂರು ಬಯಕೆಗಳನ್ನು ಮತ್ತು ತಮಗಾಗಿ ಅವರು ನೀಡಬಯಸಿದ್ದ ಸಂದೇಶವನ್ನು ಪ್ರತಿನಿಧಿಸುತ್ತವೆ ಎಂದು ಅರಿತರು. ನಂತರ ಒಂದೊಂದಾಗಿ ಮೂರು ಪ್ರತಿಜ್ಞೆಗಳನ್ನು ಕೈಗೊಂಡರು:

೧) ವೈಷ್ಣವ ಕುಲದಲ್ಲಿ ಸದಾಕಾಲವೂ ಉಳಿಯುವ ನಾನು ನಮ್ಮಾಳ್ವಾರರ ತಿರುವಾಯ್ಮೊಳಿಯ ಭಾಷ್ಯದ ರಚನೆಗಾಗಿ ವ್ಯವಸ್ಥೆ ಮಾಡುತ್ತೇನೆ ಮತ್ತು ಪ್ರಪತ್ತಿಯ ತತ್ತ್ವವನ್ನು ಪ್ರಸಾರ ಮಾಡುತ್ತೇನೆ.

೨) ಬಾದರಾಯಣರ ವೇದಾಂತ ಸೂತ್ರಗಳಿಗೆ, ಮುಂಚಿನ ಎಲ್ಲ ಭಾಷ್ಯಗಳನ್ನೂ ಪರಿಗಣನೆಗೆ ತೆಗೆದುಕೊಂಡು, ನಾನು ಜನರ ಉದ್ಧಾರಕ್ಕಾಗಿ ಜ್ಞಾನಪ್ರದಾಯಕವಾದ ಭಾಷ್ಯವನ್ನು ರಚಿಸುತ್ತೇನೆ.

೩) ವಿಷ್ಣುಪುರಾಣದ ಕರ್ತೃವಾದ ಪರಾಶರ ಮುನಿಗಳ ಸಂಸ್ಮರಣೆಗಾಗಿ ಅವರ ಹೆಸರಿನ ಒಬ್ಬ ಮಹಾವೈಷ್ಣವನನ್ನು ಬಿಟ್ಟು ಹೋಗುತ್ತೇನೆ.

ರಾಮಾನುಜರು ಈ ಮೇಲಿನ ಮೂರು ಉದ್ಘೋಷಣೆಗಳನ್ನು ಮಾಡುತ್ತಿದ್ದಂತೆಯೇ ಮೃತರಾಗಿದ್ದ ಯಾಮುನಾಚಾರ್ಯರ ಕೈಬೆರಳುಗಳು ಒಂದೊಂದಾಗಿ ಸಡಿಲಗೊಂಡು ನೆಟ್ಟಗಾದವು!

(ಮುಂದುವರೆಯುವುದು)

## ಉತ್ತಮ ಜೀವನಕ್ಕೆ ಹತ್ತು ಮಾರ್ಗದರ್ಶಕ ಸೂತ್ರಗಳು

ನೀವು ಬಿಡುಗಡೆಯನ್ನು ಬಯಸುವುದಾದರೆ, ನಿಜವಾದ ಜ್ಞಾನವನ್ನು ಪಡೆಯಬೇಕಾದರೆ, ಈ ಹತ್ತು ಕಾರ್ಯಗಳನ್ನು ಮಾಡಲೇಬೇಕು.

1. ನೀವು ಆಯ್ದುಕೊಂಡಿರುವ ಆಧ್ಯಾತ್ಮಿಕ ಮಾರ್ಗದ ಸಂಪೂರ್ಣ ತಿಳಿವಳಿಕೆ ಹಾಗೂ ಮಾಹಿತಿಯನ್ನು ಪಡೆದುಕೊಳ್ಳಿ.
2. ಮೋಹವನ್ನು ಹೇಗೆ ಬಿಡಬೇಕು ಎಂಬುದರ ಬಗ್ಗೆ ವ್ಯಾವಹಾರಿಕ ಜ್ಞಾನ ಪಡೆದುಕೊಳ್ಳಿ.
3. ನಿಮ್ಮ ಸಂಕುಚಿತ 'ಅಹಂ'ನಿಂದ ನಿಮ್ಮನ್ನು ಬಿಡಿಸಿಕೊಳ್ಳಿ.
4. ಸತ್ಯಕ್ಕೆ ಯಾವಾಗಲೂ ಮಣಿಯಿರಿ. ನಿಮ್ಮ ಆಧ್ಯಾತ್ಮಿಕ ಅನುಭವಗಳ ಬಗ್ಗೆ ಜಂಬ ಕೊಚ್ಚಿಕೊಳ್ಳಬೇಡಿ.
5. ನಿರಂತರವಾಗಿ ಆಧ್ಯಾತ್ಮಿಕ ಜ್ಞಾನವನ್ನು ಎಚ್ಚರಿಕೆಯಿಂದ ಅಭ್ಯಾಸ ಮಾಡಿ, ಆಲಸ್ಯಕ್ಕೆ ಬಲಿಯಾಗಿ ಇದನ್ನು ಕಡೆಗಣಿಸಬೇಡಿ.
6. ನಿಮಗಾಗಿರುವ ಆಧ್ಯಾತ್ಮಿಕ ಅನುಭವಗಳನ್ನು ಕುರಿತು ಏಕಾಂತದಲ್ಲಿ ಅನುಸಂಧಾನ ಮಾಡಿ.
7. ಮೂರು ಶಪಥಗಳನ್ನು ಮಾಡಿ : ಸರಳತೆ, ಪವಿತ್ರತೆ ಮತ್ತು ಗುರುವಿನಲ್ಲಿ ವಿಧೇಯತೆ. ಇವುಗಳನ್ನು ವಾಕ್ಕು, ಕಾಯ, ಮನಸ್ಸುಗಳಿಂದ ಪಾಲಿಸಿ.
8. ಎಂದೂ ಸ್ವಾರ್ಥಪರರಾಗಬೇಡಿ. ಇತರರ ಸೇವೆಗೆ ಸದಾ ಸಿದ್ಧರಾಗಿರಿ. ಯಾವಾಗಲೂ ಒಳ್ಳೆಯದನ್ನೇ ಮಾಡಿ.
9. ಶರೀರ, ಮನಸ್ಸು ಮತ್ತು ಮಾತಿನಲ್ಲಿ ಪವಿತ್ರತೆಯಿರಲಿ.
10. ಅನುಭಾವಿಗಳೂ ಪವಿತ್ರರೂ ಆದ ಗುರುಗಳ ಉಪದೇಶವನ್ನು ಮಾತ್ರ ಅನುಸರಿಸಿ. ಸ್ವತಂತ್ರವಾಗಿ ಆಧ್ಯಾತ್ಮಿಕ ಸಾಧನೆಯನ್ನು ಕೈಗೊಳ್ಳಬೇಡಿ.

ಡ್ರ್ಯಾಗೋ ಲ್ಹಾಬ್ಜೆ ೭, (ಮಹಾಯಾನ ಚಿಂತನೆ)